# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**<u>ಪತ್ರಿಕಾ ಪ್ರಕಟಣೆ</u>** ದಿನಾಂಕ: 06.07.2019

## <u>ಆಡಳಿತ ವರದಿ ಪರಿಶೀಲನಾ ಸಭೆ: ಮಾನ್ಯ ಉಪಮಹಾಪೌರರು</u>

ಬಿಬಿಎಂಪಿ ಆಡಳಿತ ವರದಿಯನ್ನು ಒಂದು ವಾರದೊಳಗಾಗಿ ಸಿದ್ಧಪಡಿಸುವಂತೆ ಪಾಲಿಕೆಯ ಎಲ್ಲ ವಿಭಾಗದ ಮುಖ್ಯಸ್ಥರಿಗೆ ಮಾನ್ಯ ಉಪಮಹಾಪೌರರು ತಾಕೀತು ಮಾಡಿದ್ದಾರೆ.

ಕಳೆದ ಐದು ವರ್ಷಗಳಿಂದ ಆಡಳಿತ ವರದಿ ಮಂಡಿಸದೇ ಇರುವ ಪರಿಣಾಮ ಶನಿವಾರ ಬಿಬಿಎಂಪಿ ಕೇಂದ್ರ ಕಚೇರಿ ಸಭಾಂಗಣ ಒಂದರಲ್ಲಿ ಉಪಮಹಾಪೌರರ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ವಿಶೇಷ ಆಯುಕ್ತರು(ಆಡಳಿತ), ಎಲ್ಲ ವಲಯ ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು(ರಸ್ತೆಗಳು), ಜಂಟಿ ನಿರ್ದೇಶಕರು(ಸಾಂಖ್ಯಿಕ) ಹಾಗೂ ವಿವಿಧ ಇಲಾಖೆಯ ಮುಖ್ಯಸ್ಥರುಗಳು ಇದ್ದರು.

ಕೆಎಂಸಿ ಕಾಯ್ದೆ 61(3)ರ ಅಡಿ ಪ್ರತಿವರ್ಷವೂ ಆಡಳಿತ ಮತ್ತು ಲೆಕ್ಕಪರಿಶೋಧನಾ ವರದಿ ಮಂಡಸಿಬೇಕು. ಆದರೆ, ಕಳೆದ 2013-14ರಿಂದ ಇದುವರೆಗೆ ವರದಿ ಮಂಡನೆಯಾಗಿಲ್ಲ. ಈ ಸಂಬಂಧ ಪ್ರಸಕ್ತ ಸಾಲಿನಲ್ಲಿ ವರದಿ ಮಂಡಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಎಲ್ಲ ಅಧಿಕಾರಿಗಳೂ ವಾರದೊಳಗಾಗಿ ವರಿದಿ ಸಿದ್ದಪಡಿಸಿ ಜಂಟಿ ನಿರ್ದೇಶಕ(ಸಾಂಖ್ಯಿಕ)ರಿಗೆ ಸಲ್ಲಿಸುವಂತೆ ಉಪಮಹಾಪೌರರು ಆದೇಶಿಸಿದರು.

ಅಧಿಕಾರಿಗಳು ಇಲಾಖಾವಾರು ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿದ ವರದಿಯನ್ನು ಸಾಂಖ್ಯಿಕ ವಿಭಾಗಕ್ಕೆ ವಾರದೊಳಗಾಗಿ ಸಲ್ಲಿಕೆ ಮಾಡಬೇಕು. ಬಳಿಕ ಆ ವರದಿಯನ್ನು ಕ್ರೂಢೀಕರಿಸಿ ಕರಡು ಸಿದ್ಧಪಸಿಕೊಂಡು ಮಾಸಿಕ ಸಭೆಯಲ್ಲಿ ಆಡಳಿತ ವರದಿ ಮಂಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**



